


ಭುವನೇಶ್ವರದಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮವೊಂದರಲ್ಲಿ ಏಷ್ಯಾ ಕಪ್ ಟ್ರೋಫಿಯೊಂದಿಗೆ ಭಾರತದ ಆಟಗಾರರು

## ಭಾರತ ತಂಡದಲ್ಲಿ ಸುನಿಲ್ ಇಲ್ಲ

ರುಪೀಂದರ್ ಪಾಲ್ ಸಿಂಗ್ ಹಾಗೂ ಸುನಿಲ್ ಇಬ್ಬರ ಹೆಸರೂ ವಿಶ್ವಕಪ್ ಪಂದ್ಯಗಳಿಗೆ ನವೆಂಬರ್ 8ರಂದು ಆಯ್ಕೆಯಾದ 18 ಆಟಗಾರರ ಪಟ್ಟಿಯಲ್ಲಿ ಇಲ್ಲ. ಸುನಿಲ್ ಹಾಗೂ ರಮಣ್‌ದೀಪ್ ಇಬ್ಬರನ್ನೂ ಫಿಟ್‌ನೆಸ್ ಕಾರಣಕ್ಕೆ ಕೈಬಿಡಲಾಗಿದೆ. ರುಪೀಂದರ್ ಫಾರ್ಮ್‌ನಲ್ಲಿ ಇಲ್ಲ ಎನ್ನುವುದು ಅವಗಣನೆಗೆ ಕಾರಣ. ಏಷ್ಯನ್ ಚಾಂಪಿಯನ್ಸ್ ಟ್ರೋಫಿಗೆ ಮುಂಚೆ ನಡೆದ ಶಿಬಿರದಲ್ಲಿ ಮೊಣಕಾಲು ನೋವು ಸುನಿಲ್ ಅವರನ್ನು ಬಾಧಿಸಿದ್ದು, ಕರ್ನಾಟಕದ ಪ್ರಾತಿನಿಧ್ಯವನ್ನೂ ಕಸಿದುಕೊಂಡಿತು. ಅದು ಈಗಲೂ ಮುಂದುವರಿದಿದೆ. ಜಾರ್ಖಂಡ್‌ನ ಬೀರೇಂದ್ರ ಲಾಕ್ರಾ ಫಿಟ್ ಆಗಿ ತಂಡಕ್ಕೆ ಮರಳಿರುವುದು ಹುರುಪು ತಂದಿರಲಿಕ್ಕೆ ಸಾಕು. ಅವರ ಅನುಭವದ ಮೇಲೆ ಕೆಲವರ ಕಣ್ಣಿದೆ. ಅಮಿತ್ ರೋಹಿದಾಸ್ ಒಡಿಶಾದ ಸ್ಥಳೀಯ ಪ್ರತಿಭೆ.

ನಾಯಕ ಮನ್‌ಪ್ರೀತ್ ಸಿಂಗ್ ಸೇರಿದಂತೆ ಪಂಜಾಬ್‌ನ ಆಟಗಾರರೇ ತಂಡದ ಅರ್ಧದಷ್ಟಿದ್ದಾರೆ. ಮಣಿಪುರದ ಮೂವರು, ಹರಿಯಾಣದ ಇಬ್ಬರು, ಉತ್ತರ ಪ್ರದೇಶ ಹಾಗೂ ಕೇರಳದ ತಲಾ ಒಬ್ಬರಿಗೆ ಅವಕಾಶ ಸಿಕ್ಕಿದೆ. ಯುವ ಪ್ರತಿಭೆಗಳಾದ ನೀಲಕಂಠ ಶರ್ಮ ಹಾಗೂ ಹಾರ್ದಿಕ್ ಸಿಂಗ್ ತಂಡಕ್ಕೆ ಅಚ್ಚರಿಯ ಸೇರ್ಪಡೆ. ನೀಲಕಂಠ ಮಣಿಪುರದವರಾದರೆ, ಹಾರ್ದಿಕ್ ಪಂಜಾಬ್ ಹುಡುಗ.

ನವೆಂಬರ್ 28ರಂದು ಉದ್ಘಾಟನಾ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಆಡುವ ಮೂಲಕ ಈ ತಂಡ ತನ್ನ ಸಾಮರ್ಥ್ಯವನ್ನು ಒರೆಗೆಹಚ್ಚಿ ನೋಡಲಿದೆ.

ಹೀಗಿದೆ ತಂಡ:

**ಗೋಲ್ ಕೀಪರ್‌ಗಳು:** ಪಿ.ಆರ್. ಶ್ರೀಜೇಶ್, ಕೃಷನ್ ಬಹಾದುರ್ ಪಾಠಕ್.

**ಡಿಫೆಂಡರ್ಸ್:** ಹರ್ಮನ್‌ಪ್ರೀತ್ ಸಿಂಗ್, ಬೀರೇಂದ್ರ ಲಾಕ್ರಾ, ವರುಣ್ ಕುಮಾರ್, ಕೊಥಾಜೀತ್ ಸಿಂಗ್, ಸುರೇಂದರ್ ಕುಮಾರ್, ಅಮಿತ್ ರೋಹಿದಾಸ್.

**ಮಿಡ್‌ಫೀಲ್ಡರ್‌ಗಳು:** ಮನ್‌ಪ್ರೀತ್ ಸಿಂಗ್ (ನಾಯಕ), ಚಿಂಗ್ಲೇನ್‌ಸಾನಾ ಸಿಂಗ್ (ಉಪ ನಾಯಕ), ನೀಲಕಂಠ ಶರ್ಮ, ಹಾರ್ದಿಕ್ ಸಿಂಗ್, ಸುಮಿತ್.

**ಫಾರ್ವರ್ಡ್ ಆಟಗಾರರು:** ಆಕಾಶ್‌ದೀಪ್ ಸಿಂಗ್, ಮನ್‌ದೀಪ್ ಸಿಂಗ್, ದಿಲ್‌ಪ್ರೀತ್ ಸಿಂಗ್, ಲಲಿತ್ ಕುಮಾರ್ ಉಪಾಧ್ಯಾಯ್, ಸಿಮ್ರನ್‌ಜೀತ್ ಸಿಂಗ್.

**ಮುಖ್ಯ ಕೋಚ್:** ಹರೇಂದ್ರ ಸಿಂಗ್.




ಶ್ರೀ ಪಂಚಮುಖಿ ಜ್ಯೋತಿಷ್ಯಂ



INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450